# ರೂಪ ವಿರೂಪಗಳ ದಾಟಿದ ಅನನ್ಯ ಪ್ರೇಮಕಥೆ...

ವಿಕೃತಿಯ ದಾಳಿಯ ಮೆಟ್ಟಿ ನಿಂತ ಜೀವನಕಾವ್ಯದಂಥ ಈ ನಗೆಯ ಗಳಿಗೆಯ ಚಿತ್ರ ತೆಗೆದಿದ್ದು 2018ರ ಫೆಬ್ರುವರಿ 2ರಂದು.

ಜಗದ ನೋವಿಗೆಲ್ಲ ನಗುವಿನ ಮುಲಾಮು ಹಚ್ಚಹೊರಟವಳಂತೆ ಕಾಣಿಸುವ ಈ ಹುಡುಗಿಯ ಹೆಸರು ಪ್ರಮೋದಿನಿ. ಅವಳೆದುರು ಕೂತ ಹುಡುಗನ ಹೆಸರು ಸರೋಜ್ ಸಾಹೂ. ಇವರಿಬ್ಬರೂ ಭೇಟಿಯಾಗಿದ್ದು ಈ ಚಿತ್ರ ತೆಗೆಯುವುದಕ್ಕೂ ಸುಮಾರು ನಾಲ್ಕು ವರ್ಷಗಳ ಹಿಂದೆ, ಏಪ್ರಿಲ್ 2014ರಲ್ಲಿ. ಅಂದು ಸರೋಜ್, ನರ್ಸ್ ಆಗಿ ಕೆಲಸ ಮಾಡುತ್ತಿದ್ದ ತನ್ನ ಸ್ನೇಹಿತೆಯನ್ನು ಭೇಟಿಯಾಗಲು ಒಡಿಶಾದ ಕಟಕ್‌ನ ನರ್ಸಿಂಗ್ ಹೋಂಗೆ ಬಂದಿದ್ದ. ಅವತ್ತು ತನ್ನ ಗೆಳತಿ ಚಿಕಿತ್ಸೆ ನೀಡುತ್ತಿದ್ದ ಹುಡುಗಿಯನ್ನು ನೋಡಿ ಸರೋಜ್ ಬೆಚ್ಚಿಬಿದ್ದಿದ್ದ. ಆ ಹುಡುಗಿಯ ಮುಖ ಪೂರ್ತಿ ಸುಟ್ಟು ಹೋಗಿತ್ತು. ಕೈಗಳ ಚರ್ಮ ಕಿತ್ತು ಬಂದಿತ್ತು. ಆ್ಯಸಿಡ್ ಎರಚಿದ ಪರಿಣಾಮವಾಗಿ ಎರಡೂ ಕಣ್ಣುಗಳು ದೃಷ್ಟಿಹೀನವಾಗಿದ್ದವು. ನಾಲ್ಕು ತಿಂಗಳ ತುರ್ತುನಿಗಾಘಟಕದಲ್ಲಿ ಚಿಕಿತ್ಸೆ ಪಡೆದಿದ್ದಳು. ಕೊಂಚವಾದರೂ ಸುಧಾರಿಸಿಕೊಳ್ಳಲು ಕನಿಷ್ಠ ನಾಲ್ಕು ವರ್ಷ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ಡಾಕ್ಟರ್ ಹೇಳಿದ್ದರು. ಬೆಳಕಿನ ಸೆಲೆಯೇ ಇಲ್ಲದ ಆ ಕಗ್ಗತ್ತಲ ದಾರಿಯಲ್ಲಿ ನಡೆಯಲೂ ಆಗದೆ, ನಿಲ್ಲಲೂ ಆಗದೆ ನರಳುತ್ತ ಮಲಗಿದ್ದ ಆ ಹುಡುಗಿಯೇ ಪ್ರಮೋದಿನಿ. ಸರೋಜ್ ಬೆಚ್ಚಿಬಿದ್ದಿದ್ದು ಅವಳ ಮುಖದ ವಿರೂಪತೆಗಲ್ಲ; ಬದಲಿಗೆ ತನ್ನಂಥದೇ ಮನುಷ್ಯನೊಬ್ಬನ ಮುಖವನ್ನು ಸುಟ್ಟು ವಿಕೃತ ಆನಂದವನ್ನು ಹೊಂದಬಲ್ಲ ವ್ಯಕ್ತಿಯ ಮಾನಸಿಕ ಕ್ರೌರ್ಯಕ್ಕೆ.

ಸರೋಜ್ ಮತ್ತು ಪ್ರಮೋದಿನಿಯ ಪರಿಚಯವಾಗಿದ್ದು ಹೀಗೆ. ಅಂದಿನಿಂದ ಪ್ರಮೋದಿನಿಯ ಕುಸಿದುಹೋದ ಆತ್ಮಶಕ್ತಿಗೆ ಸರೋಜ್ ಊರುಗೋಲಾದ. ಅವನ ಸಾಂತ್ವನದ ಧ್ವನಿಯೇ ಅವಳ ಪಾಲಿಗೆ ಪರಮೌಷಧವಾಗಿತ್ತು. ಇಡೀ ಜಗತ್ತು ಬೆನ್ನುತಿರುಗಿಸಿ ನಿಂತಾಗ ಅವನ ಸಾಂಗತ್ಯವೇ ಅವಳಿಗೆ ತನ್ನ ಬದುಕಿನ ಬಗ್ಗೆ ನಂಬಿಕೆ ಉಳಿಸಿಕೊಡುವ ಮರುಜವಣಿಯಾಗಿತ್ತು. ಇಷ್ಟಕ್ಕೂ ಪ್ರಮೋದಿನಿ, ಸರೋಜ್‌ನನ್ನು ಕಣ್ಣಾರೆ ನೋಡಲು ಸಾಧ್ಯವಾಗಿದ್ದು 2017ರ ಸೆಪ್ಟೆಂಬರ್ 14ರಂದು. ಅಂದರೆ ಪರಿಚಯವಾದ ಮೂರು ವರ್ಷಗಳ ನಂತರ!

ಕಣ್ಣಿನ ಶಸ್ತ್ರಚಿಕಿತ್ಸೆ ಮುಗಿದು ಕಣ್ತೆರೆದವಳಿಗೆ ಎದುರಿಗಿದ್ದಿದ್ದೆಲ್ಲ ಮಸುಕು ಮಸುಕಾಗಿ ಕಾಣಲಾರಂಭಿಸಿತ್ತು. ಆ ಮಸುಕು ಮೆಲ್ಲ ಮೆಲ್ಲನೆ ಮರೆಯಾದ ಹಾಗೆ ಕಣ್ಣೆದುರು ಸರೋಜ್‌ನ ರೂಪ ತಿಳಿಯಾಗಿ ಮೂಡಿನಿಂತಿತ್ತು. ಅದೊಂದು ಹೊಸ ಹುಟ್ಟು. ಆ ದಿವ್ಯ ಕ್ಷಣಗಳನ್ನು ನೆನಪಿಸಿಕೊಳ್ಳುವಾಗ ಭಾವುಕತೆಯಿಂದ ಪ್ರಮೋದಿನಿ ಕತ್ತು ಬಿಗಿಯುತ್ತದೆ. 'ಅಂದು ಕಣ್ತೆರೆದಾಗ ನನ್ನೆದುರು ಸರೋಜ್ ಇದ್ದ. ಅದೇ ಮೊದಲ ಬಾರಿಗೆ ನಾನು ಅವನ ಮುಖ ನೋಡಿದ್ದು. ನಾನು ಅವನ ಜೊತೆ ತೇಲಾಡುತ್ತಿದ್ದೇನೋ ಎಂದು ಭಾಸವಾಯ್ತು. ಸರೋಜ್‌ನ ಮುಖವನ್ನು ಈ ಜನ್ಮದಲ್ಲಿ ನೋಡಬಹುದು ಎಂದು ನಾನು ಖಂಡಿತ ಊಹಿಸಿರಲಿಲ್ಲ' ಎಂದು ನೆನಪಿಸಿಕೊಳ್ಳುತ್ತಾರೆ ಅವಳು. ಅಂದು ಅವಳ ದೇಹಕ್ಕೆ ದೃಷ್ಟಿಶಕ್ತಿ ಸಿಕ್ಕಿತ್ತು. ಆದರೆ ಅದಕ್ಕಿಂತ ಮೂರು ವರ್ಷಗಳ ಹಿಂದೆಯೇ ಸರೋಜ್ ಎಂಬ ವ್ಯಕ್ತಿಯ ಹೆಸರಿನಲ್ಲಿ ಅವಳ ಬದುಕಿಗೆ ಧೀಶಕ್ತಿ ಸಿಕ್ಕಿಯಾಗಿತ್ತು.

ಇಂದು ಪ್ರಮೋದಿನಿ ಆ್ಯಸಿಡ್ ದಾಳಿಗೆ ತುತ್ತಾದವರ ಸಬಲೀಕರಣದ ಕೆಲಸದಲ್ಲಿ ತೊಡಗಿಕೊಂಡಿದ್ದಾಳೆ. ಇಬ್ಬರೂ ಸೇರಿ ಆ್ಯಸಿಡ್ ದಾಳಿಗೆ ತುತ್ತಾದವರ ಸಹಾಯಕ್ಕಾಗಿ ಒಂದು ಎನ್‌ಜಿಓ ನಡೆಸುತ್ತಿದ್ದಾರೆ. 2018ರ ಪ್ರೇಮಿಗಳ ದಿನ ರಿಂಗ್ ಬದಲಿಸಿಕೊಂಡು ದಾಂಪತ್ಯಜೀವನಕ್ಕೆ ಅಡಿಯಿಟ್ಟಿದ್ದಾರೆ. ಅಂತರಂಗದ ಸೌಂದರ್ಯವೇ ಅವರ ಬದುಕಿನ ದಾರಿಯನ್ನು ಬೆಳಗಿಸುತ್ತಿದೆ.



ಓಕುಳಿಯಾಟಕ್ಕೆ ಹೊರತಾಗಿಲ್ಲ. ವರ್ಷದಿಂದ ವರ್ಷಕ್ಕೆ ಅಲ್ಲಿ ರಾಸಾಯನಿಕ ದಾಳಿಗಳ ಅಪರಾಧಗಳ ಸಂಖ್ಯೆ ಹೆಚ್ಚುತ್ತಲೇ ಇದೆ. 2015ರಲ್ಲಿ 261 ಪ್ರಕರಣಗಳು ವರದಿಯಾಗಿದ್ದರೆ, 2016ರಲ್ಲಿ 454 ಪ್ರಕರಣಗಳು ದಾಖಲಾಗುವ ಮೂಲಕ ಶೇ. 74ರ ಹೆಚ್ಚಳ ಅಲ್ಲಿ ದಾಖಲಾಗಿತ್ತು. 'ಲಂಡನ್ ಟೈಮ್ಸ್' ಪ್ರಕಾರ, 2012ರಿಂದ 2015ರ ಅವಧಿಯಲ್ಲಿ ರಾಸಾಯನಿಕ ದಾಳಿಗಳ ಪ್ರಮಾಣ ಬ್ರಿಟನ್‌ನಲ್ಲಿ ಶೇ.30ರಷ್ಟು ಹೆಚ್ಚಾಗಿದೆ. ಭಾರತಕ್ಕೂ ಲಂಡನ್‌ನಲ್ಲಿನ ಘಟನೆಗಳಿಗೂ ವ್ಯತ್ಯಾಸವೆಂದರೆ, ಮಿಕದ ಲಿಂಗದಲ್ಲಿ ವ್ಯತ್ಯಾಸವಿರುವುದು. ಭಾರತದಲ್ಲಿ ಆ್ಯಸಿಡ್ ದಾಳಿಗೆ ಗುರಿಯಾಗುವ ಬಹುತೇಕರು ಹೆಣ್ಣುಮಕ್ಕಳೇ ಆಗಿರುತ್ತಾರೆ. ಆದರೆ, ಬ್ರಿಟನ್‌ನಲ್ಲಿ ದಾಳಿಗೆ ಒಳಗಾಗುವರಲ್ಲಿ ಹುಡುಗರೇ ಹೆಚ್ಚು. ಪಡ್ಡೆ ಹುಡುಗರು ಅಥವಾ ಗ್ಯಾಂಗುಗಳ ನಡುವಿನ ಸಂಘರ್ಷ ಆ್ಯಸಿಡ್ ದಾಳಿಯ ರೂಪು ಪಡೆದುಕೊಳ್ಳುತ್ತದೆ. ಆ್ಯಸಿಡ್ ಅನ್ನು ಆಯುಧದಂತೆ ಬಳಸುವುದನ್ನು ನಿರ್ಬಂಧಿಸುವುದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಕಾನೂನುಗಳು ಇಲ್ಲದಿರುವುದು ಕೂಡ ಅಪಾಯಕಾರಿ ಆಮ್ಲಗಳನ್ನು ಬ್ರಿಟನ್‌ನಲ್ಲಿ ಬಿಡುಬೀಸಾಗಿ ಬಳಸುವುದಕ್ಕೆ ಕಾರಣವಾಗಿದೆ.

## ಬದಲಾಗಬೇಕು ಮನೋಧರ್ಮ

ಆ್ಯಸಿಡ್ ಎರಚುವಂತಹ ವಿಕೃತಿಗಳನ್ನು ತಡೆಯಲಿಕ್ಕೆ ಇರುವ ದಾರಿಗಳು ಎರಡು: ಮೊದಲನೆಯದು ಕಾನೂನಿಗೆ ಸಂಬಂಧಿಸಿದ್ದು. ಆ್ಯಸಿಡ್ ಮಾರಾಟಕ್ಕೆ ನಿರ್ಬಂಧಗಳನ್ನು ವಿಧಿಸುವುದು ಹಾಗೂ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಕೆಲಸವನ್ನು ಕಾರ್ಯಾಂಗ ಹಾಗೂ ನ್ಯಾಯಾಂಗ ಮಾಡಬೇಕಿದೆ. ಇದಕ್ಕೆ ಪೂರಕವಾಗಿ ಆಗಬೇಕಾದ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ. ಅದು ನಮ್ಮ ಮನಸ್ಸುಗಳನ್ನು ತಿಳಿಗೊಳಿಸಿಕೊಳ್ಳುವ ಕೆಲಸ. ಮಕ್ಕಳ ಮನಸ್ಸನ್ನು ಪ್ರಾಂಜಲಗೊಳಿಸುವ ಕೆಲಸ.

ಲಿಂಗಭೇದ ಮನಸ್ಥಿತಿ ಮೂಡದಂತೆ ಮಕ್ಕಳನ್ನು ರೂಪಿಸುವ ಕೆಲಸ ಮನೆಗಳಲ್ಲೂ ಶಾಲೆಗಳಲ್ಲೂ ನಡೆಯಬೇಕು. ಹೆಣ್ಣಿನ ಮೇಲೆ ದೌರ್ಜನ್ಯ ಎಸಗುವುದು ಲಜ್ಜೆಗೆಟ್ಟವರ ಕೆಲಸ ಎನ್ನುವ ಮನಸ್ಥಿತಿ ಎಲ್ಲರಲ್ಲೂ ಮೂಡಬೇಕು. ದೌರ್ಜನ್ಯಕ್ಕೆ ಒಳಗಾದವರು ಮುಖ ಮರೆಸಿಕೊಂಡು ಬದುಕುವ ಸ್ಥಿತಿ ಸಮಾಜದಲ್ಲಿದೆ. ಆ ಪರಿಸ್ಥಿತಿ ಬದಲಾಗಿ, ಅಪರಾಧ ಎಸಗಿದವರು ಸಮಾಜದ ಕಡೆಗಣ್ಣಿಗೆ ತುತ್ತಾಗುವ ಸಂದರ್ಭ ರೂಪುಗೊಳ್ಳಬೇಕು. ಈ ಎಚ್ಚರ, ವಿವೇಕ ಮೂಡಿದರಷ್ಟೇ ಆರೋಗ್ಯಕರ ಸಮಾಜ ಸೃಷ್ಟಿಯಾಗಬಲ್ಲದು.

ಹೆಣ್ಣನ್ನು ದೇವತೆ ಎಂದು ಪೂಜಿಸುವ ಸಂಸ್ಕೃತಿ ನಮ್ಮದು ಎಂದು ಹೇಳಿಕೊಳ್ಳುತ್ತೇವೆ. ಪೂಜಿಸದಿದ್ದರೂ ಚಿಂತೆಯಿಲ್ಲ, ಸಹಜೀವಿಯನ್ನಾಗಿ ಗೌರವ ನೀಡುವುದು ಸಾಧ್ಯವಾದರೆ ಅದು ಹೆಣ್ಣಿಗೆ, ಸಮಾಜಕ್ಕೆ, ನಮ್ಮ ಬದುಕಿಗೆ ಸಲ್ಲಿಸುವ ಬಹುದೊಡ್ಡ ಗೌರವವಾಗುತ್ತದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in